ಮಲ್ಲನಗೌಡ ಪಾಟೀಲ ರಂಭಾಪುರ

*ಹೆಣ್ಣಿನ ಸೌಂದರ್ಯವನ್ನು ಬಿಂಬಿಸುವ ಪ್ರಮುಖ ಅಂಗ ಯಾವುದು?*



ಗಂಡಿನ ಕಣ್ಣು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಹಣತೆ ಉರಿಯಲು ಎಣ್ಣೆ, ಬತ್ತಿ ಬೇಕು. ಹೊಟ್ಟೆ ಉರಿಯಲು ಏನು ಬೇಕು?*

ಸಣ್ಣ ಬುದ್ಧಿ ಸಾಕು.

ರತ್ನಜ, ಮೈಸೂರು

*ನೀವು ಮರಣಿಸುವ ದಿನಾಂಕ ನಿಮಗೆ ಮೊದಲೇ ಗೊತ್ತಾದರೆ ಏನು ಮಾಡುವಿರಿ?*

ಯೋಚಿಸಬೇಡಿ; ಹೇಳಿಕಳುಹಿಸುತ್ತೇನೆ. ತಪ್ಪದೆ ವೈಕುಂಠದ ಊಟ ಮಾಡಿಯೇ ಹೋಗುವಿರಂತೆ.

ಪಿ.ಜಿ. ರಾಘವೇಂದ್ರ, ಮೈಸೂರು

*ಕೊಟ್ಟವನು ಕೋಡಂಗಿಯಾದರೆ ವಾಪಸ್ ಕೊಟ್ಟವನು?*

ಕಮಾಯಿಗಾಗಿ ಕಮಂಗಿಯಾದ ಭಟ್ಟಂಗಿ.

ರಮೇಶ ಜಿ. ಬೊಂಗಾಳೆ, ಹರಿಹರ

*ಅಧ್ಯಾತ್ಮಕ್ಕೂ, ವಿಜ್ಞಾನಕ್ಕೂ ಏನು ವ್ಯತ್ಯಾಸ?*

ಅಧ್ಯಾತ್ಮದಲ್ಲಿ ಇರುವುದು ಒಂದೇ ಜನಕ – ಜಗಜನಕ; ವಿಜ್ಞಾನದಲ್ಲಿ ಆಮ್ಲಜನಕ, ಜಲಜನಕ, ಸಾರಜನಕ...

ಕು.ಗೋ., ಉಡುಪಿ

*ನಮ್ಮ ಸರ್ಕಾರದ ಯಾವ ಇಲಾಖೆ ಸರಿಯಾದ ಕೆಲಸ ಮಾಡುತ್ತಿದೆ ಮಹಾಸ್ವಾಮಿ?*

ಕ್ಷಮಿಸಿ; 'ಇಲಾಖೆ' ಪದದಲ್ಲೇ ill ಮತ್ತು lock ಇರುವುದರಿಂದ ಕೆಲಸ ಕೆಡುತ್ತದೆ ಅಥವಾ ನಿಲ್ಲುತ್ತದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಸಂಸಾರದ ಕ್ರಿಕೆಟ್ಟಿನಲ್ಲಿ ಗಂಡ ಬ್ಯಾಟು, ಹೆಂಡತಿ ಬಾಲು. ಮಕ್ಕಳು?*

ರನ್ನುಗಳು!

ಎಸ್.ಎಸ್. ಆನಂದ್, ಕತ್ತರಗುಪ್ಪೆ

*ಇಲಿ ಅಲ್ಲದಿದ್ದರೂ ಅದನ್ನು 'ಮೌಸ್' ಅಂತ ಕರೆಯೋದು ಯಾಕೆ ಸ್ವಾಮಿ?*

**M – manual; O– operating; U – unit; S – searching; E – e-data!**

ಆರತಿ ಘಟಿಕಾರ್, ದುಬೈ

*ಬಲಪಂಥೀಯರು ಹಾಗೂ ಎಡಪಂಥೀಯರು ಇಬ್ಬರೂ ಭಿನ್ನಾಭಿಪ್ರಾಯವಿಲ್ಲದೆ ಒಟ್ಟಿಗೆ ಸೇರುವ ಜಾಗ ಯಾವುದು?*

ಡೈನಿಂಗ್ ಹಾಲ್‌ನಲ್ಲಿ – ಊಟದ ಕೈ ವಿಷಯದಲ್ಲಿ ಎಲ್ಲರೂ ಬಲಪಂಥೀಯರೇ.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಧನಿಕನಿಗೆ ಎಲ್ಲಾ ಇದ್ದರೂ ಬಡವನಿಗಿರುವ ನೆಮ್ಮದಿ ಇರುವುದಿಲ್ಲವಲ್ಲಾ, ಯಾಕೆ?*

ಧನಿಕ ಮಲಗೋ ರೂಪಾಯಿಯಲ್ಲಿ ಬಡವ ಮಲಗೋ ಚಾಪೆಗಿಂತ ಗಂಟುಗಳೂ ಜಾಸ್ತಿ, ಒತ್ತೋದೂ ಜಾಸ್ತಿ.

ಮಲ್ಲಿಕಾ ಮಿತ್ತೂರ್, ಬೆಂಗಳೂರು

*ಮನುಷ್ಯನ ಆಯಸ್ಸು ವರ್ಷಗಟ್ಟಲೆ ಇರುವ ಬದಲು ಒಂದು ದಿನ ಮಾತ್ರ ಇದ್ದಿದ್ದರೆ ಏನಾಗುತ್ತಿತ್ತು?*

ಗುಣ ಇದೇ ಇರುತ್ತಿತ್ತು; ಫೈಲ್ ಕಂಪ್ರೆಸ್ಡ್ ಫೈಲ್ ಆಗುವಂತೆ ಲೈಫ್ ಕಂಪ್ರೆಸ್ಡ್ ಲೈಫ್ ಆಗುತ್ತಿತ್ತು.


ಎಸ್.ಸಿ. ರಮೇಶ್, ಮೈಸೂರು

*ಧೃತರಾಷ್ಟ್ರನ ಪುತ್ರವ್ಯಾಮೋಹಕ್ಕೂ, ಲೋಕಾಯುಕ್ತ ನ್ಯಾಯಾಧೀಶರ ಪುತ್ರವ್ಯಾಮೋಹಕ್ಕೂ ವ್ಯತ್ಯಾಸವೇನು?*

ಧೃತರಾಷ್ಟ್ರ ದುರ್ಯೋಧನನಿಗೆ ಹೇಡಿಯಂತೆ ಕದ್ದು ಓಡಿಹೋಗಲು ಪ್ರೋತ್ಸಾಹಿಸಲಿಲ್ಲ.

ಮೋಹನ್ ರಾಜು, ಶಿವಮೊಗ್ಗ

*ವಿದ್ಯೆಗೆ ವಿನಯವೇ ಭೂಷಣ; ನಿದ್ದೆಗೆ?*




ವಿದ್ಯೆಯೇ ಕಾರಣ. ಟೆಕ್ಸ್ಟ್‌ಬುಕ್ ಹಿಡಿದಾಗ ಬರುವಷ್ಟು ನಿದ್ರೆ ನಿದ್ರೆಮಾತ್ರೆ ತೆಗೆದುಕೊಂಡರೂ ಬರುವುದಿಲ್ಲ.

## ಬಹುಮಾನಿತ ಪ್ರಶ್ನೆ

ಆರೆಮ್ಮೆಸ್ ನಾಗ, ಬೆಂಗಳೂರು

*ಕ್ರಿಕೆಟ್‌ನಲ್ಲಿ ಗೆದ್ದ ಟೀಂ ಗೆದ್ದ ತಕ್ಷಣ ಸ್ಟಂಪ್‌ಗೆ ಮೊದಲು ಕೈ ಹಾಕುವುದು ಆತ್ಮರಕ್ಷಣೆಗಾಗಿಯೇ..?*

ಊಹೂ. ಭರ್ಜರಿ ಊಟವಾದಮೇಲೂ ಕೈಲೊಂದು ಲಾಡು ಇಸ್ಕೊಂಡ್ಹೋಗೋದು ನಮ್ಮ ಪದ್ಧತಿ.

ಮಹಾವೀರ ಕಾಸಾರ, ಶಿವಮೊಗ್ಗ

*ಇತ್ತೀಚಿನ ಹುಡುಗಿಯರು ಗಂಡನ ಮನೆಗೆ ಹೋಗುವಾಗ ಅಳುತ್ತಿಲ್ಲವಲ್ಲಾ...?*

ಚೆನ್ನಾಯಿತು! ಸಿಂಹಿಣಿಗೆ ಕುರಿಯ ಮನೆಗೆ ಹೋಗಲು ಅಳುಕೇಕೆ!

ಟಿ.ಆರ್. ರವೀಂದ್ರ, ಬೆಂಗಳೂರು

*ನಾವು ಯಾವುದೇ ಫಲಾಪೇಕ್ಷೆಯಿಲ್ಲದೆ ಮಾಡುವ ಕಾರ್ಯ ಯಾವುದಾದರೂ ಇದೆಯೇ?*

ಇದೆಯಲ್ಲಾ.... ನಿಲ್ಸೇ ನಿಲ್ಲಿಸ್ತಾನೆ, ಬಂದೇ ಬರ್ತಾನೇಂತ ನಿರೀಕ್ಷೆ ಇಟ್ಕೊಳ್ದೇ ಆಟೋಗೆ ಚಪ್ಪಾಳೆ ತಟ್ಟೋದು!

ವಿ. ಹೇಮಂತಕುಮಾರ್, ಬೆಂಗಳೂರು

*ನಿಂತಲ್ಲಿ, ಕುಳಿತಲ್ಲಿ, ನೋಡಿದಾ ಕಡೆಯಲ್ಲಿ ಅವಳೇ ಕಾಣ್ತಾ ಳಲ್ಲಾ...?*

ಅಷ್ಟೇತಾನೆ! ಒಮ್ಮೆ ನಿಮ್ಮಾಕೆಗೆ ಅವಳನ್ನು ತೋರಿಸಿಬಿಡಿ. ಆಮೇಲೆ ಬೇಕೂಂದ್ರೂ ಕಾಣದ್ಹಾಗೆ ವ್ಯವಸ್ಥೆ ಆಗತ್ತೆ.

ದೀಪಕ್, ಕಂಬದಕೋಣೆ

*ಕನ್ನಡ ಭಾಷೆ ಸಾಯುತ್ತಿದೆ ಎನ್ನುತ್ತಲೇ ತಮ್ಮ ಬದುಕಿಗೊಂದು ದಾರಿ ಕಂಡುಕೊಂಡಿರುವ ಮಹನೀಯರಿಗೆ ಏನಂತೀರಿ?*

ಅವರನ್ನು ಹಾಗೆ ಕರೆದು ಅವಮಾನಿಸಬೇಡಿ. ಅವರು ಮಹನೀಯರಲ್ಲ; ಮನೀ(**money**)ಯರು.

ಎಸ್.ಎನ್. ಮಹಾಬಲರಾವ್, ಅಗ್ರಹಾರ

*ಕತ್ತೆಯಷ್ಟು ವಯಸ್ಸಾದರೂ ಹುಡುಗಿ ಕಂಡೊಡನೆ ಮಗುವಾಗುವುದೇಕೆ?*

ವಯಸ್ಸು ಕತ್ತೆಯದಾದರೂ ಬುದ್ಧಿ ಕೋತಿಯದಾದ್ದರಿಂದ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಬೆಂಗಳೂರಿನ ಬಿಬಿಎಂಪಿಯಲ್ಲಿ ರಮಣಿಯರ ಆಡಳಿತ ಹೇಗಿರಬಹುದು?*

'ನಿಮಗೆ ಓಲೆ ಬಂದಿದೆ ಮೇಡಂ' ಎಂದರೆ 'ಓಹ್! ಹೌದಾ? ಎಷ್ಟು ಗ್ರಾಂ? ಯಾವ ಜ್ಯೂಯೆಲರ್ಸ್‌ದು?' ಎನ್ನುವ ರೀತಿ!

ಹಾಡ್ಯ. ಬಿ. ಜಯಾನಂದ, ಮೈಸೂರು

*ಸಾಯುವ ಮುನ್ನ ಸತ್ಯ ಹೇಳುತ್ತಾರಂತೆ. ರಾಜಕಾರಣಿಗಳು ಆಗಲಾದರೂ ಸತ್ಯ ಹೇಳಿಯಾರೆ?*

ಹೇಗೆ ಸಾಧ್ಯ? ಸತ್ಯ ಅವರ ಇಡೀ ಜೀವನಕ್ಕೆ ಔಟ್ ಆಫ್ ಸಿಲಬಸ್.

ರಾಮ್